# ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ

ನವನಗರ, ಹುಬ್ಬಳ್ಳಿ – 580025

**ನ್ಯಾಕ 'ಎ' ಶ್ರೇಣಿ ಮಾನ್ಯತೆ**

ದೂರವಾಣಿ ಸಂಖ್ಯೆ : 0836-2222392, 2222472 ಜಾಲತಾಣ www.kslu.lsrnataka.gov.in

ಇ-ಮೇಲ್ :caseworker.acad.kslu@gmail.com


**ವಿದ್ಯಾಮಂಡಳ**

ಸಂಖ್ಯೆ: ಕರಾಕಾವಿ/ಕು.ಸ/ವಿ.ಮಂ-2/ಪ್ರವೇಶಾತಿ/2022-23/- 1896 ದಿ: 05.01.2023.

## ಸುತ್ತೋಲೆ

ವಿಷಯ: 2022-23ನೇ ಸಾಲಿಗೆ ಹೆಚ್ಚುವರಿ ವಿಭಾಗ ಪ್ರಾರಂಭಿಸಲು ಅಥವಾ ಹೊಸದಾಗಿ ಎಲ್.ಎಲ್.ಎಮ್. ಸ್ನಾತಕ ಪದವಿ ಪ್ರಾರಂಭಿಸಲು ಸ್ಥಾನಿಕ ವಿಚಾರಣಾ ಸಮಿತಿ ಶಿಫಾರಸ್ಸು ಮಾಡಿರುವ ಕಾನೂನು ಮಹಾವಿದ್ಯಾಲಯಗಳು ಹೆಚ್ಚುವರಿ ವಿಭಾಗ ಅಥವಾ ಹೊಸ ಪದವಿಗೆ ಪ್ರವೇಶಾತಿ ನೀಡದೇ ಇರುವ ಕುರಿತು:

ಉಲ್ಲೇಖ: 1) ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 05.01.2023

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಎಲ್ಲ ಸಂಯೋಜಿತ ಕಾನೂನು ಮಹಾವಿದ್ಯಾಲಯಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, 3ವರ್ಷದ, 5ವರ್ಷದ ಕಾನೂನು ಪದವಿಗಳು ಮತ್ತು ಎಲ್ಎಲ್.ಎಮ್. ಸ್ನಾತಕ ಪದವಿಗಳಿಗೆ 2022-23ನೇ ಸಾಲಿಗೆ ಹೆಚ್ಚುವರಿ ವಿಭಾಗ ಕೋರಿ ಸಂಯೋಜನೆಗಾಗಿ ಸಲ್ಲಿಸಿದ ಕಾನೂನು ಮಹಾವಿದ್ಯಾಲಯಗಳಲ್ಲಿ ಕೆಲವೊಂದು ಮಹಾವಿದ್ಯಾಲಯಗಳಿಗೆ ಸ್ಥಾನಿಕ ವಿಚಾರಣಾ ಸಮಿತಿಯು ಸದರಿ ಹೆಚ್ಚುವರಿ ವಿಭಾಗಕ್ಕೆ ಅಥವಾ ಎಲ್.ಎಲ್.ಎಮ್. ಸ್ನಾತಕ ಪದವಿಯನ್ನು ಪ್ರಾರಂಭಿಸಲು ಶಿಫಾರಸ್ಸು ಮಾಡಿರುವುದು ಸರಿಯಷ್ಟೆ. ಆದರೆ, ಸದರಿ ಹೊಸದಾಗಿ ಎಲ್.ಎಲ್.ಎಮ್. ಸ್ನಾತಕ ಪದವಿ ಪ್ರಾರಂಭಿಸಲು ಸರ್ಕಾರದ ಅನುಮತಿ ಪಡೆದುಕೊಳ್ಳುವುದು ಅವಶ್ಯಕವಾಗಿರುತ್ತದೆ. ಹಾಗೆಯೇ ಹೆಚ್ಚುವರಿ ವಿಭಾಗವನ್ನು ಪ್ರಾರಂಭಿಸಲು ಸರ್ಕಾರದ ಮತ್ತು ಭಾರತೀಯ ವಕೀಲ ಮಂಡಳಿಯ ಅನುಮತಿಯು ಪಡೆದುಕೊಳ್ಳುವುದು ಅವಶ್ಯಕವಾಗಿರುತ್ತದೆ.

ಸದರಿ ಸರ್ಕಾರದ ಹಾಗೂ ಭಾರತೀಯ ವಕೀಲ ಮಂಡಳಿಯ ಅನುಮತಿ ಇಲ್ಲದೇ ಹೆಚ್ಚುವರಿ ವಿಭಾಗಕ್ಕೆ ಅಥವಾ ಹೊಸದಾಗಿ ಪ್ರಾರಂಭಿಸಲು ಉದ್ದೇಶಿಸಿರುವ ಎಲ್.ಎಲ್.ಎಮ್. ಸ್ನಾತಕ ಪದವಿಗೆ ವಿದ್ಯಾರ್ಥಿಗಳಿಗೆ ಪ್ರವೇಶಾತಿ ನೀಡದಂತೆ ಕಟ್ಟುನಿಟ್ಟಾಗಿ ನಿರ್ದೇಶಿಸಲಾಗಿದೆ.

ಸರ್ಕಾರದ ಹಾಗೂ ಭಾರತೀಯ ವಕೀಲ ಮಂಡಳಿಯವರ ಅನುಮತಿ ಇಲ್ಲದೇ ವಿದ್ಯಾರ್ಥಿಗಳ ಪ್ರವೇಶಾತಿ ಪಡೆದಿದ್ದಲ್ಲಿ ಆಯಾ ಕಾನೂನು ಮಹಾವಿದ್ಯಾಲಯದ ಪ್ರಾಂಶುಪಾಲರೇ ಹೊಣೆಗಾರರಾಗಿರುತ್ತಾರೆಂದು ತಿಳಿಸುತ್ತಾ ಸದರಿ ಪ್ರವೇಶಾತಿಗಳನ್ನು ವಿಶ್ವವಿದ್ಯಾಲಯವು ಅನುಮೋದನೆ ಮಾಡುವುದಿಲ್ಲವೆಂದು ಈ ಮೂಲಕ ಸೂಚಿಸಲಾಗಿದೆ.

ಕುಲಸಚಿವರು

ಗೆ,

ನಿರ್ದೇಶಕರು ಕರಾಕಾವಿ ಕಾನೂನು ಶಾಲೆ &<br>
ಪ್ರಾಂಶುಪಾಲರು ಎಲ್ಲ ಸಂಯೋಜಿತ ಕಾನೂನು ಮಹಾವಿದ್ಯಾಲಯಗಳು,<br>
ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ<br>
ನವನಗರ, ಹುಬ್ಬಳ್ಳಿ –

ಪ್ರತಿಯನ್ನು:

1) ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ಕ.ರಾ.ಕಾ.ವಿ. ಹುಬ್ಬಳ್ಳಿ.
2) ಕುಲಸಚಿವರ ಆಪ್ತ ಕಾರ್ಯದರ್ಶಿಗಳು, ಕ.ರಾ.ಕಾ.ವಿ. ಹುಬ್ಬಳ್ಳಿ.